# ಶ್ರೀರಾಮಕೃಷ್ಣರು ಉಪದೇಶಿಸಿದಂತೆ ಗೃಹಸ್ಥ ಜೀವನದಲ್ಲಿ ಅಧ್ಯಾತ್ಮ

**ಡಾ. ಸಿ.ಪಿ.ಕೃಷ್ಣಕುಮಾರ್**

ಸಂನ್ಯಾಸಿಗಳಿಗೂ ಗೃಹಸ್ಥರಿಗೂ ಆದರ್ಶ ಪುರುಷರಾಗಿರುವ ಅವತಾರಶ್ರೇಷ್ಠರಾದ ಶ್ರೀರಾಮಕೃಷ್ಣರು ಗೃಹಸ್ಥರನ್ನು ಉದ್ದೇಶಿಸಿ ನೀಡಿರುವ ಉಪದೇಶಗಳು ಸಂಸಾರದಲ್ಲಿದ್ದುಕೊಂಡೇ ಪಾರಮಾರ್ಥಿಕವನ್ನು ಸಾಧಿಸುವ ಮಾರ್ಗವನ್ನು ತೋರಿಸಿಕೊಡುತ್ತವೆ. ಈ ಕುರಿತು ವಿವರಿಸಿರುವ ಲೇಖಕರು ಕನ್ನಡದ ಸುಪ್ರಸಿದ್ಧ ಬರಹಗಾರರು. ಮುನ್ನೂರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಗ್ರಂಥಗಳನ್ನು ರಚಿಸಿ ಪ್ರಕಟಿಸಿರುವ ಅವರು ಮೈಸೂರು ಆಶ್ರಮದ ಭಕ್ತರೂ ಆಗಿದ್ದಾರೆ.

ಒಬ್ಬಾತ ಶ್ರೀರಾಮಕೃಷ್ಣರನ್ನು ಕೇಳುತ್ತಾನೆ: ''ನಾನು ಮದುವೆ ಮಾಡಿಕೊಳ್ಳಬಹುದೆ?''

ಅವರು ಉತ್ತರಿಸುತ್ತಾರೆ: ''ಮಾಡಿಕೊ. ಅದಕ್ಕೇನಂತೆ? ನಾನು ಮಾಡಿಕೊಂಡಿಲ್ಲವೆ?''

ಶ್ರೀರಾಮಕೃಷ್ಣರ ಈ ಉಕ್ತಿ ವಿಷಯಕ್ಕೊಂದು ಕೀಲಿಕೈಯಂತಿದೆ. ಶ್ರೀಶಾರದಾದೇವಿ ಮತ್ತು ಶ್ರೀರಾಮಕೃಷ್ಣರು ಮದುವೆಯಾದ ಸತಿಪತಿಗಳಾಗಿದ್ದರು, ದಿಟ; ಆದರೆ ಅವರ ನಡುವೆ ದೈಹಿಕ ಸಂಬಂಧ ಸ್ವಲ್ಪ ಮಾತ್ರವೂ ಇರಲಿಲ್ಲ. 'ಕಾಮಕಾಂಚನ' ರಹಿತವಾದ ಆ ದಿವ್ಯದಾಂಪತ್ಯದ ಹಿನ್ನೆಲೆಯಲ್ಲಿ ಎಲ್ಲವನ್ನೂ ಅರ್ಥಮಾಡಿಕೊಳ್ಳಬೇಕು.

ಶ್ರೀರಾಮಕೃಷ್ಣರು 'ಅವತಾರ ವರಿಷ್ಠ' ಮಾತ್ರವಲ್ಲ; ಅಧ್ಯಾತ್ಮ ವರಿಷ್ಠರೂ ಕೂಡ. ಅಧ್ಯಾತ್ಮದ ಸಮಸ್ತ ಶ್ರೇಣಿಗಳನ್ನೂ ಸ್ತರಗಳನ್ನೂ ಯಶಸ್ವಿಯಾಗಿ ಸಂಚರಿಸಿದ ಯೋಗಿವರೇಣ್ಯ, ಅವರು. 'ಸರ್ವಧರ್ಮಸಮನ್ವಯಾಚಾರ್ಯ' ಎಂಬುದು ಅವರ ಪ್ರಸಿದ್ಧವಾದ ಅಭಿಧಾನ. ಅಷ್ಟೆ ಅಲ್ಲ, ಅವರು ಎಲ್ಲ ವಿದ್ಯಮಾನಗಳಲ್ಲೂ ಅತಿರೇಕದೂರರಾದ ಸಮನ್ವಯ ಸಿದ್ಧರಾಗಿದ್ದರು. ಅವರದು ಸರ್ವಾಶ್ರಮಸಮನ್ವಯ ಕೂಡ. ಅವರು ಸಂಸಾರಿಯಲ್ಲದಿದ್ದರೂ ಸಂಸಾರವನ್ನು, ಗೃಹಸ್ಥಜೀವನವನ್ನು ದ್ವೇಷಿಸಿದವರಲ್ಲ; ಎಲ್ಲರಿಗೂ ಸಂಸಾರತ್ಯಾಗವನ್ನು ವಿಧಿಸಿದವರಲ್ಲ. ಸಂಸಾರಿಗಳ ಬಗೆಗೆ ಅವರು ಅನುಕಂಪಶೀಲರಾಗಿದ್ದರು (**'ಧನ್ಯೋ ಗೃಹಸ್ಥಾಶ್ರಮಃ'** ಎಂಬ ಉಕ್ತಿಯೊಂದನ್ನು ಸ್ಮರಿಸಬಹುದು).

ಸಂಸಾರ, ಸಂನ್ಯಾಸಗಳನ್ನು ಸಮನ್ವಯಗೊಳಿಸಿದ ಮಹಾನುಭಾವ, ಶ್ರೀರಾಮಕೃಷ್ಣರು ಎಂದರೆ ತಪ್ಪಲ್ಲ. ಗೃಹಸ್ಥ ಜೀವನದಲ್ಲಿ ಪರಮಾರ್ಥವನ್ನು ಪ್ರತಿಷ್ಠಾಪಿಸಿದ ವೈಶಿಷ್ಟ್ಯ ಅವರದು.

ಸಂಸಾರದಲ್ಲಿದ್ದುಕೊಂಡೂ, ಅದರ ಸಹಸ್ರಮುಖ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡೂ ಉತ್ಕಟ ಅಧ್ಯಾತ್ಮಪರತೆಯಿಂದ



ಭಗವನ್ಮುಖಿಯಾಗುವ ಪರಿಯನ್ನು, ದೈವಸ್ಥಾಯಿಯಾಗುವ ಅವಸ್ಥೆಯನ್ನು ಶ್ರೀರಾಮಕೃಷ್ಣರು ಅನೇಕ ದೃಷ್ಟಾಂತಗಳಿಂದ ವಿಶದೀಕರಿಸಿದ್ದಾರೆ.

ಇದೊಂದು ಪರಿಣಾಮಕಾರಿಯಾದ ದೃಷ್ಟಾಂತ, ಸಂಸಾರದಲ್ಲಿ ಹೇಗೆ ಬದುಕಬೇಕು ಎಂಬುದಕ್ಕೆ:

('ಸಂಸಾರದಲ್ಲಿ ಇದ್ದು ಭಗವಂತನ ಕಡೆಗೆ ಹೋಗುವುದೆಂದರೆ ಬಹಳ ಕಷ್ಟ' ಎಂಬ ಒಬ್ಬರ ಮಾತಿಗೆ ಉತ್ತರವಾಗಿ)

''ಅಭ್ಯಾಸ ಯೋಗವಿದೆಯಲ್ಲ! ಕಾಮಾರಪುಕುರಿನಲ್ಲಿ ಬಡಗಿಯ ಹೆಂಗಸರು ಅವಲಕ್ಕಿ ವ್ಯಾಪಾರ ಮಾಡುತ್ತಾರೆ. ಅವರು ಎಷ್ಟು ಕಡೆಗೆ ಕಣ್ಣಿಟ್ಟು ಕೆಲಸ ಮಾಡುತ್ತಾರೆ ಎಂಬುದನ್ನು ಸ್ವಲ್ಪ ಕೇಳು. ಏತ ಅವಲಕ್ಕಿಯನ್ನು ಕುಟ್ಟುತ್ತಲೇ ಇರುತ್ತದೆ. ಹೆಂಗಸು ಒಂದು ಕೈಯಿಂದ ಒರಳಿಗೆ ಬತ್ತವನ್ನು ತಳ್ಳಿಕೊಡುತ್ತಿರುತ್ತಾಳೆ. ಸಾಲದುದಕ್ಕೆ ಅದೇ ಸಮಯಕ್ಕೆ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಲು ಕೊಡುತ್ತಿರುತ್ತಾಳೆ. ಸಾಲದುದಕ್ಕೆ ಅದೇ ಸಮಯಕ್ಕೆ ಗಿರಾಕಿಗಳು ಬೇರೆ ಬಂದಿರುತ್ತಾರೆ. ಆ ಕಡೆ ಏತ ಬತ್ತವನ್ನು ಕುಟ್ಟುತ್ತಲೇ ಇರುತ್ತದೆ. ಈ ಕಡೆ ಗಿರಾಕಿಗಳೊಡನೆ ವ್ಯಾಪಾರ ಮಾಡುತ್ತಿರುತ್ತಾಳೆ. 'ಬಾಕಿ ಏನು ಕೊಡಬೇಕಾಗಿದೆಯೊ ಅದನ್ನು ಮೊದಲು ಕೊಟ್ಟುಬಿಟ್ಟು ಬಳಿಕ ಸಾಮಾನು ತೆಗೆದುಕೊಂಡು ಹೋಗಿ'. ಹಾಗೇ ನೋಡು, ಮಗುವಿಗೆ ಹಾಲು ಕೊಡುವುದು, ಒರಳಿಗೆ ಬತ್ತವನ್ನು ತಳ್ಳುವುದು, ಅವಲಕ್ಕಿಯಾದ ನಂತರ ಅದನ್ನು ಒರಳಿನಿಂದ ಹೊರಕ್ಕೆ ತೆಗೆಯುವುದು, ಗಿರಾಕಿಗಳೊಡನೆ ವ್ಯಾಪಾರ ಮಾಡುವುದು — ಇಷ್ಟನ್ನೂ ಒಟ್ಟಿಗೆ ಮಾಡುತ್ತಾಳೆ. ಇದಕ್ಕೇ ಅಭ್ಯಾಸಯೋಗ ಅಂತ ಹೆಸರು. ಆದರೂ ಏತದ ಮೊನೆ ಎಲ್ಲಿ ಕೈಯನ್ನು ಜಜ್ಜಿ ಬಿಡುವುದೋ ಎಂದು ಆಕೆ ತನ್ನ ಮನಸ್ಸಿನ ಹದಿನೈದು ಆಣೆ ಭಾಗವನ್ನು ಒರಳ ಕಡೆಗೇ ಇಟ್ಟಿರುತ್ತಾಳೆ. ಉಳಿದುಕೊಂಡಿರುವ ಆ ಒಂದಾಣೆ ಮನಸ್ಸಿನಿಂದ ಮಗುವಿಗೆ ಹಾಲು ಕೊಡುವುದು, ಗಿರಾಕಿಗಳೊಡನೆ ವ್ಯಾಪಾರ ಮಾಡುವುದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಾಳೆ. ಅದೇ ರೀತಿ ಯಾರು ಸಂಸಾರಸ್ಥರೋ ಅವರು ತಮ್ಮ ಮನಸ್ಸಿನ ಹದಿನೈದು ಆಣೆ ಭಾಗವನ್ನು ಭಗವಂತನಿಗೆ ಮೀಸಲಾಗಿ ಇಡಬೇಕು; ಬಳಿಕ ಒಂದಾಣೆ ಮನಸ್ಸಿನಿಂದ ಬಾಕಿ ಎಲ್ಲಾ ಕೆಲಸಕಾರ್ಯಗಳನ್ನು ಮಾಡಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಸರ್ವನಾಶವಾಗುತ್ತದೆ.''

ಇದೊಂದು ದೃಷ್ಟಾಂತ ಪರಂಪರೆ, ''ಸಂಸಾರದಲ್ಲಿ ಯಾವ ರೀತಿಯಲ್ಲಿ ಇರಬೇಕು?'' ಎಂಬ ಮಾಸ್ಟರ್ ಮಹಾಶಯನ ಪ್ರಶ್ನೆಗೆ ಉತ್ತರವಾಗಿ ಹೊಮ್ಮಿದ್ದು:

''ಶ್ರೀಮಂತರ ಮನೆ ದಾಸಿ ಎಲ್ಲಾ ಕೆಲಸಕಾರ್ಯಗಳನ್ನು ಮಾಡುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಹಳ್ಳಿಯಲ್ಲಿರುವ ತನ್ನ ಮನೆಯ ಕಡೆಗೇ. ಯಜಮಾನರ ಮಕ್ಕಳನ್ನು ತನ್ನವೆಂದೇ ಬೆಳೆಸುತ್ತಾಳೆ. ಅಷ್ಟೇ ಅಲ್ಲ, ಅವನ್ನ ಕರೆಯುತ್ತಾಳೆ, 'ನನ್ನ ರಾಮ, ನನ್ನ ಹರಿ' ಎಂಬುದಾಗಿ ಆದರೆ ಅವಾವುವೂ ತನ್ನದಲ್ಲವೆಂಬುದು ಆಕೆಗೆ ಹೃದಯದಲ್ಲಿ ಚೆನ್ನಾಗಿ ಗೊತ್ತಿದೆ.''

ವಿಶಿಷ್ಟವಾದ ಈ ದೃಷ್ಟಾಂತವನ್ನೂ ಲಕ್ಷಿಸಬಹುದು: ''ಜಾರೆಯಂತಿರಿ. ಆಕೆಯು ಮನೆಯ ಕೆಲಸ ಕಾರ್ಯಗಳನ್ನೆಲ್ಲಾ ಚೆನ್ನಾಗಿ ಮಾಡುತ್ತಿರುತ್ತಾಳೆ. ಆದರೆ ಆಕೆಯ ಮನಸ್ಸು ಮಾತ್ರ ಉಪಪತಿಯ ಮೇಲೆ ನೆಲೆಸಿರುತ್ತದೆ. ಭಗವಂತನಲ್ಲಿ ಮನಸ್ಸಿಟ್ಟು ಸಂಸಾರದಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡಿ.(ಆದರೆ ಅದು ಬಹಳ ಕಠಿಣವೇನೋ ನಿಜ).''

ಬೆನ್ನಲ್ಲಿ ಫಣಿಯ ಹೋಲಿಕೆ ಒಂದೆಡೆ ಬರುತ್ತದೆ: ''ಕೆಲಸದ ಸಮಯದಲ್ಲಿ ಕೂಡ ಮನಸ್ಸನ್ನು ಭಗವಂತನ ಅಡಿದಾವರೆಯಲ್ಲಿ ನೆಲೆಸಿರುವಂತೆ ಮಾಡಬೇಕು. ಉದಾಹರಣೆಗೆ, ಒಬ್ಬನಿಗೆ ಬೆನ್ನು ಫಣಿ ಎದ್ದಿದೆ ಅಂತ ಇಟ್ಟುಕೊಳ್ಳಿ. ಆತ ಎಲ್ಲಾ ಕೆಲಸಗಳನ್ನೂ ಮಾಡುತ್ತಾನೆ. ಆದರೆ ಆತನ ಮನಸ್ಸು ಮಾತ್ರ ಸರ್ವದಾ ಬೆನ್ನು ಫಣಿಯ ಮೇಲೆಯೇ ನೆಲೆಸಿರುತ್ತದೆ.''

''ಆಮೆ ನೀರಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲಿದೆ ಗೊತ್ತೆ ನಿನಗೆ? ತನ್ನ ಮೊಟ್ಟೆಗಳಿರುವ ದಡದಲ್ಲಿ. ಸಂಸಾರದ ಎಲ್ಲ ಕೆಲಸಕಾರ್ಯಗಳನ್ನೂ ಮಾಡು. ಆದರೆ ಮನಸ್ಸನ್ನು ಮಾತ್ರ ಭಗವಂತನಲ್ಲಿ ನೆಡು.''

''ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಅಂಟು ಕೈಗೆ ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸ ಕಾರ್ಯಗಳಲ್ಲಿ ಕೈ ಇಡಬೇಕು. ಆದರೆ ಈ ವಿಧವಾದ ಭಕ್ತಿ ದೊರಕಬೇಕಾದರೆ, ನಿರ್ಜನ ಪ್ರದೇಶಗಳಿಗೆ ಹೋಗಿ ಇರಬೇಕು. ಬೆಣ್ಣೆ ತೆಗೆಯಬೇಕಾದರೆ, ನಿರ್ಜನ ಪ್ರದೇಶದಲ್ಲಿ ಹಾಲಿಗೆ ಹೆಪ್ಪು ಹಾಕಿ ಇಡಬೇಕು; ಅದನ್ನು ಅತಿಯಾಗಿ ಅಲ್ಲಾಡಿಸುತ್ತಿದ್ದರೆ, ಅದು ಮೊಸರಾಗದು. ಬಳಿಕ ಉಳಿದ ಎಲ್ಲಾ ಕೆಲಸಕಾರ್ಯಗಳನ್ನೂ ಒಂದು ಮೂಲೆಯಲ್ಲಿ ಕಟ್ಟಿಟ್ಟು, ನಿರ್ಜನ ಪ್ರದೇಶದಲ್ಲಿ ಕುಳಿತು ಅದನ್ನು ಕಡೆಯಬೇಕು. ಆಗ ಬೆಣ್ಣೆ ತೆಗೆಯಲು ಸಾಧ್ಯವಾಗುವುದು... ಸಂಸಾರವೇ ನೀರು, ಮನಸ್ಸೇ ಹಾಲು. ಹಾಲನ್ನು ನೀರಿಗೆ ಸುರಿದರೆ ಅವೆರಡೂ ಬೆರೆತು ಒಂದಾಗಿ ಬಿಡುತ್ತವೆ; ಮತ್ತೆ ಶುದ್ಧ ಹಾಲು ಬೇಕೆಂದರೆ ಕಣ್ಣ ಮೇಲೆ ಕಣ್ಣಿಟ್ಟು ಹುಡುಕಿದರೂ ಅದು ದೊರೆಯುವ ಹಾಗೇ ಇಲ್ಲ. ಆದರೆ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಬೆಣ್ಣೆ ತೆಗೆದು ಅದನ್ನು ನೀರಿನಲ್ಲಿ ಇಟ್ಟರೆ, ಅದು ಅಲ್ಲಿ ತೇಲಲಾರಂಭಿಸುತ್ತದೆ.''

ಈ ಸಂಬಂಧವಾಗಿ ಇನ್ನೂ ಕೆಲವು ದೃಷ್ಟಾಂತಗಳು ಶ್ರೀರಾಮಕೃಷ್ಣರಿಂದ ಪ್ರಣೀತವಾಗಿವೆ.

ಒಂದು ಕಡೆ ಕೆಸರುಮೀನಿನ ದೃಷ್ಟಾಂತ ಕೊಡುತ್ತಾರೆ: ''(ಸಂಸಾರದಲ್ಲಿ) ಕೆಸರು ಮೀನಿನ ಹಾಗೆ ಇರಬೇಕು. ಸಂಸಾರದಿಂದ ದೂರ ಹೋಗಿ ನಿರ್ಜನ ಪ್ರದೇಶದಲ್ಲಿ ಭಗವಚ್ಚಿಂತನೆಯನ್ನು ಆಗಾಗ ಮಾಡಿದರೆ, ಭಗವಂತನಲ್ಲಿ ಭಕ್ತಿ ಅಂಕುರವಾಗುತ್ತದೆ. ಆಗ ಸಂಸಾರದಲ್ಲಿ ನಿರ್ಲಿಪ್ತನಾಗಿ ಇರಲು ಸಾಧ್ಯವಾಗುತ್ತದೆ. ಕೆಸರೇನೋ ಇದೆ. ಮೀನು ಅದರಲ್ಲಿ ವಾಸಿಸಬೇಕಾಗಿದೆ. ಆದರೂ ಕೆಸರು ಅದರ ಮೈಗೆ ಅಂಟಿಕೊಳ್ಳುವುದಿಲ್ಲ. ಆ ರೀತಿಯ ಮನುಷ್ಯ ಅನಾಸಕ್ತನಾಗಿ ಸಂಸಾರದಲ್ಲಿ ಇರುತ್ತಾನೆ.''

ಇದು ಬೋಧಪ್ರದವಾದ ಹಕ್ಕಿಯ ಚಿತ್ರ: ''ಹಕ್ಕಿ ಕಾವಿಗೆ ಕುಳಿತಿರುವಾಗ ಅದರ ಇಡೀ ಮನಸ್ಸು ಮೊಟ್ಟೆಯ ಮೇಲೆ ನೆಲಸಿ, ಅದರ ಕಣ್ಣು ಮಾತ್ರ ಸುಮ್ಮನೆ ಮೇಲಕ್ಕೆ ನೋಡುತ್ತಿರುವ ಹಾಗೆ ಕಾಣಿಸುತ್ತದೆ.''

ಇದು ಕೂಡ ಗಮನಾರ್ಹ: ''ಸಂಸಾರದಲ್ಲಿರು. ಆದರೆ ತಲೆಯ ಮೇಲಿನ ಕಲಶ ಮಾತ್ರ ಕೆಳಕ್ಕೆ ಬೀಳದ ಹಾಗೆ ನೋಡಿಕೊ. ಅಂದರೆ ಭಗವಂತನ ಕಡೆಗೆ ಮನಸ್ಸು ಸತತ ಹರಿಯುತ್ತಿರುವಂತೆ ನೋಡಿಕೊಳ್ಳುತ್ತಿರಬೇಕು.''

ದೋಣಿ ನೀರಿನಲ್ಲಿದ್ದರೆ ತಪ್ಪಲ್ಲ, ಆದರೆ ನೀರು ದೋಣಿಯಲ್ಲಿರಬಾರದು ಎಂಬ ದೃಷ್ಟಾಂತ ಅತ್ಯಂತ ಅರ್ಥಪೂರ್ಣವಾದುದು; ಪ್ರಸಿದ್ಧವಾದುದು ಕೂಡ. ದೋಣಿ ಎಂದರೆ ಮನಸ್ಸು; ನೀರು ಎಂದರೆ ಸಂಸಾರ.

ಹುಡುಗರು ಕಂಬವನ್ನು ಹಿಡಿದುಕೊಂಡು ಗಿರಗಿರನೆ ಸುತ್ತುವ ಚಿತ್ರವೊಂದನ್ನು ಕೊಡುತ್ತಾರೆ, ಶ್ರೀರಾಮಕೃಷ್ಣರು. ಭಗವಚ್ಚಿಂತನೆ ಎಂಬ ಕಂಬವನ್ನು ಬಿಗಿಯಾಗಿ ಹಿಡಿದಿರುವ ತನಕ ಅಪಾಯವಿಲ್ಲ ಗೃಹಸ್ಥರಿಗೆ.

''ಮಹಾಶಯರೆ, ನಾವು ಸಂಸಾರಿಗಳು. ನಮಗೆ ಏನಾದರೂ ಉಪದೇಶ ಕೊಡಿ'' ಎಂದೊಬ್ಬರ ಕೋರಿಕೆ. ಶ್ರೀರಾಮಕೃಷ್ಣರು ಹೇಳುತ್ತಾರೆ: ''ಮೊದಲು ಭಗವಂತನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಅನಂತರ ಈ ಜಗತ್ತಿನ ಕಾರ್ಯವನ್ನು ಮಾಡಿ. ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಬಿಗಿಯಾಗಿ ಹಿಡಿದುಕೊಂಡು ಇನ್ನೊಂದು ಕೈಯಿಂದ ಸಾಂಸಾರಿಕ ಕೆಲಸಕಾರ್ಯಗಳನ್ನು ಮಾಡಿ.''

ಇದೂ ಶ್ರೀರಾಮಕೃಷ್ಣರ ಉಪದೇಶ: ''ಸಂಸಾರದಲ್ಲಿ ನಿರ್ಲಿಪ್ತರಾಗಿ ಇರುವುದು ಎಂದರೆ ಕಠಿಣ... ಹಾಗಾದರೆ ಸಂಸಾರಿಗಳಿಗೆ ಮಾರ್ಗವೇ ಇಲ್ಲ ಅಂತಲೇನು? ಅವಶ್ಯವಾಗಿ ಇದೆ. ಆಗಾಗ ಕೆಲವು ದಿನಗಳ ಮಟ್ಟಿಗೆ ನಿರ್ಜನ ಪ್ರದೇಶದಲ್ಲಿ ಸಾಧನೆ ಮಾಡಬೇಕು. ಆಗ ಭಕ್ತಿ ದೊರೆಯುತ್ತದೆ, ಜ್ಞಾನ ದೊರೆಯುತ್ತದೆ. ಬಳಿಕ ಹೋಗಿ ಸಂಸಾರದಲ್ಲಿ ಇದ್ದರೆ ಯಾವ ತೊಂದರೆಯೂ ಆಗದು.''

''ಅತ್ಯಂತ ಆವಶ್ಯಕವಾದುದು ಕಾಮಕಾಂಚನ ತ್ಯಾಗ. ಆ ತ್ಯಾಗವೇ ನಿಜವಾದ ತ್ಯಾಗ. ಗೃಹಸ್ಥನು ಆಗಾಗ ನಿರ್ಜನ ಪ್ರದೇಶಕ್ಕೆ ಹೋಗಿ, ಸಾಧನೆ ಭಜನೆ ಮಾಡಿ ಭಕ್ತಿಯನ್ನು ಗಳಿಸಿಕೊಳ್ಳಬೇಕು. ಅವರು ಮಾನಸಿಕವಾಗಿ ತ್ಯಾಗ ಮಾಡಬೇಕು'' ಎಂದೂ ಹೇಳುತ್ತಾರೆ, ಶ್ರೀರಾಮಕೃಷ್ಣರು.

ಸಂಸಾರವೆಂದರೆ ಕೋಟೆಯೊಳಗಿದ್ದಂತೆ; ಕೋಟೆಯ ಒಳಗಿನಿಂದ ಯುದ್ಧ ಮಾಡುವುದು ಮೇಲು ಎಂಬುದು ಬಹು ಮುಖ್ಯವಾದ ಶ್ರೀರಾಮಕೃಷ್ಣರ ವಾಣಿ.

''ಸಂಸಾರದಲ್ಲಿ ಭಗವಂತನ ಸಾಕ್ಷಾತ್ಕಾರ ಏಕೆ ದೊರೆಯುವುದಿಲ್ಲ?'' (ಅರ್ಥಾತ್ ದೊರೆತೇ ದೊರೆಯುತ್ತದೆ) ಎಂದು ಆಶ್ವಾಸಿಸುತ್ತಾರೆ ಶ್ರೀರಾಮಕೃಷ್ಣರು.

ಒಬ್ಬ ಬ್ರಾಹ್ಮಭಕ್ತ ಪ್ರಶ್ನಿಸುತ್ತಾನೆ: ''ಮಹಾಶಯರೆ, ಪೂರ್ಣ ತ್ಯಾಗ ಮಾಡದೆ ಇದ್ದರೆ ಭಗವಂತನ ಸಾಕ್ಷಾತ್ಕಾರ ಪಡೆಯಲಾಗುವುದಿಲ್ಲವೆ?'' ಶ್ರೀರಾಮಕೃಷ್ಣರು ನಗುತ್ತ ಉತ್ತರಿಸುತ್ತಾರೆ: ''ನಿಮಗೆ ಸಾಧ್ಯವಾಗಬಹುದು! ನೀವು ಸಂಪೂರ್ಣವಾಗಿ ತ್ಯಾಗ ಮಾಡುವುದರ ಆವಶ್ಯಕತೆ ಏನಿದೆ? ಭಗವಂತ, ಜಗತ್ತು ಎರಡು ಕಡೆಗೂ ದೃಷ್ಟಿಯಿಟ್ಟು ಆನಂದದಿಂದಲೇ ಇದ್ದೀರಿ.... ಸತ್ಯವಾಗಿ ಹೇಳುತ್ತೇನೆ: ನೀವು ಸಂಸಾರದಲ್ಲಿ ಇದ್ದೀರಿ. ಇದು ದೋಷವಾದ್ದೇನಲ್ಲ. ಆದರೆ ನೀವು ಭಗವಂತನ ಕಡೆಗೆ ಮನಸ್ಸು ತಿರುಗಿಸಿ ಇರಬೇಕು.''

ಶ್ರೀರಾಮಕೃಷ್ಣರು, ''ಭಗವಚ್ಚಿಂತನೆ, ನಾಮಗುಣಕೀರ್ತನೆ, ನಿತ್ಯಕರ್ಮ ಇವೇ ಮೊದಲಾದವುಗಳಲ್ಲಿ ತೊಡಗಿರಬೇಕು.'' ಎಂದಾಗ ಬ್ರಾಹ್ಮಭಕ್ತ ಕೇಳುತ್ತಾನೆ: ''ಸಂಸಾರಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳಿವೆಯಲ್ಲ — ಹಣ ಸಂಪಾದಿಸುವುದು, ಇವೇ ಮೊದಲಾದವು-ಅವನ್ನು?'' ಶ್ರೀರಾಮಕೃಷ್ಣರ ಉತ್ತರ: ''ಹೌದು, ಅವನ್ನೂ ಮಾಡಬೇಕು — ಸಂಸಾರಯಾಪನೆಗೆ ಅತ್ಯವಶ್ಯವಾದವುಗಳನ್ನು ಮಾತ್ರ .''

ಒಂದು ಕಡೆ ಸರ್ಕಸ್ ಕುದುರೆಯ ಮೇಲಿನ ಮಹಿಳೆಯ ದೃಷ್ಟಾಂತ ಕೊಡುತ್ತಾರೆ, ಶ್ರೀರಾಮಕೃಷ್ಣರು. ಇದು ಮಾಸ್ಟರಿಗೆ ಹೇಳಿದ್ದು: ''ನೋಡಿದೆಯಾ, ಹೇಗೆ ಆ ಕುದುರೆ ಮಿಂಚಿನ ವೇಗದಲ್ಲಿ ಓಡುತ್ತಿದ್ದರೂ ಆ ಮಹಿಳೆ ಒಂಟಿಕಾಲಿನಲ್ಲಿ ಅದರ ಮೇಲೆ ನಿಂತುಕೊಂಡಿದ್ದಳು? ಎಂಥ ಕಷ್ಟವಾದ ಸಾಹಸಕಾರ್ಯ! ಆಕೆ ಬಹಳ ಕಾಲದಿಂದ ಅಭ್ಯಾಸ ಮಾಡಿರಬೇಕು. ಸಂಸಾರಿಯ ಜೀವನವೂ ಇದೇ ರೀತಿ ಕಠಿಣ. ಎಲ್ಲೋ ಕೆಲವರು ಮಾತ್ರ ಭಗವಂತನ ಕೃಪೆಯಿಂದ ಮತ್ತು ತಮ್ಮ ತೀವ್ರ ಸಾಧನೆ ಭಜನೆಯ ಬಲದಿಂದ ಅದರಲ್ಲಿ ಜಯಶೀಲರಾಗುತ್ತಾರೆ.''

'ಅಹಂ' ಕುರಿತು ಶ್ರೀರಾಮಕೃಷ್ಣರು ಕೇಶವಸೇನನಿಗೆ ಹೇಳಿದರಂತೆ, ''ಅಹಂ ಅನ್ನು ತ್ಯಜಿಸದವರಿಗೆ ಭಗವಂತನ ಸಾಕ್ಷಾತ್ಕಾರ ಸಾಧ್ಯವಾಗುವುದಿಲ್ಲ... 'ಅಪಕ್ವ ಅಹಂ', 'ದುಷ್ಟ ಅಹಂ' ಇವನ್ನು ಮಾತ್ರ ತ್ಯಜಿಸು ಅಂತ ಹೇಳುತ್ತಿದ್ದೇನೆ. ಆದರೆ 'ಪಕ್ವ ಅಹಂ', 'ದಾಸ ಅಹಂ', 'ವಿದ್ಯಾ ಅಹಂ' ಇವುಗಳಿಂದ ಯಾವ ಕೆಡುಕೂ ಉಂಟಾಗದು.''

''ಹೆಚ್ಚಾಗಿಹಣಸಂಪಾದಿಸಲುನಾನುಪ್ರಯತ್ನಿಸಬಹುದೆ?'' ಎಂಬ ಮಾಸ್ಟರ್‌ನ ಪ್ರಶ್ನೆಗೆ ಪರಮಹಂಸರು ಉತ್ತರಿಸುತ್ತಾರೆ; ''ವಿದ್ಯಾಸಂಸಾರದ ಸಲುವಾಗಿ ಬೇಕಾದರೆ ಹಾಗೆ ಮಾಡಬಹುದು. ಹೆಚ್ಚಾಗಿ ಧನಾರ್ಜನೆ ಮಾಡು, ಆದರೆ ಒಳ್ಳೆಯ ರೀತಿಯಿಂದ. ಜೀವನದ ಉದ್ದೇಶ ಧನಾರ್ಜನೆಯಲ್ಲ, ಭಗವಂತನ ಸೇವೆ.''

''ಏನು ಮಾಡಿದರೆ ಆತನ ದರ್ಶನವನ್ನು ಪಡೆದುಕೊಳ್ಳಬಹುದು?'' ಎಂಬ ಬ್ರಾಹ್ಮಭಕ್ತನ ಪ್ರಶ್ನೆಗೆ ಶ್ರೀರಾಮಕೃಷ್ಣರ

ಉತ್ತರ: '' ಮಗು ಗಿಲಿಕೆಯಲ್ಲೇ ಮಗ್ನವಾಗಿ ತಾಯಿಯನ್ನೇ ಮರೆತಿರುವಾಗ, ಆಕೆ ಅಡಿಗೆ ಮತ್ತು ಉಳಿದ ಮನೆ ಕೆಲಸ ಇವನ್ನೆಲ್ಲಾ ಮಾಡುತ್ತಿರುತ್ತಾಳೆ. ಯಾವಾಗ ಗಿಲಿಕೆ, ಉರುಟುಗೋಲು ಯಾವುದೂ ಬೇಡವಾಗಿ ಅದನ್ನು ಬಿಸಾಡಿ ಚೀತ್ಕಾರ ಮಾಡುತ್ತ ಅಳಲಾರಂಭಿಸುವುದೋ ಆಗ ತಾಯಿ ಅನ್ನದ ತಪ್ಪಲೆ ಕೆಳಗಿಳಿಸಿ ಓಡಿ ಓಡಿ ಬಂದು ಮಗುವನ್ನು ಕಂಕುಳಿಗೆ ಹಾಕಿಕೊಳ್ಳುತ್ತಾಳೆ.''

ಇವೂ ಶ್ರೀರಾಮಕೃಷ್ಣರ ಮೌಲಿಕ ವಚನಗಳು: ''ಸಂಸಾರವನ್ನು ಏಕೆ ಬೇಡ ಎನ್ನುತ್ತೀರಿ? ಅದೇನೂ ತಪ್ಪಲ್ಲ, ಆದರೆ ಭಗವಂತನಲ್ಲಿ ಮನಸ್ಸಿಟ್ಟು ಅದರಲ್ಲಿರಬೇಕು''; ''ಸಂಸಾರವನ್ನು ನಡೆಸಿಕೊಂಡು ಹೋಗಿ, ಭಗವಂತನನ್ನೂ ಕರೆಯುತ್ತಿರಿ.''

''ಸಂಸಾರವನ್ನು ತ್ಯಜಿಸುವ ಆವಶ್ಯಕತೆ ಏನಿಲ್ಲ. ಮನೆಯಲ್ಲಿ ಇದ್ದುಕೊಂಡೆ ಭಗವಂತನನ್ನು ಪಡೆಯಬಹುದು,''; ''ನೀವು ಮಾನಸಿಕವಾಗಿ ತ್ಯಾಗ ಮಾಡಿ. ಸಂಸಾರದಲ್ಲಿ ಅನಾಸಕ್ತರಾಗಿ ಇದ್ದುಕೊಂಡಿರಿ.''

ಅತಿಯಾಗಿ ಕುಡಿಯುತ್ತಿದ್ದ ಸುರೇಂದ್ರನಿಗೆ ಶ್ರೀರಾಮಕೃಷ್ಣರು ಒಮ್ಮೆಗೆಯೇ ಕುಡಿತವನ್ನು ಬಿಡು ಎಂದು ಹೇಳಲಿಲ್ಲ. ಹೀಗೆ ಹೇಳಿದರು: ''ಸುರೇಂದ್ರ, ಒಂದು ಕೆಲಸ ಮಾಡು, ಕುಡಿಯುವುದನ್ನು ಭಗವಂತನಿಗೆ ಅರ್ಪಿಸಿ ಕುಡಿ...'' ಶ್ರೀರಾಮಕೃಷ್ಣರ ಈ ಉಪಾಯ ಕುತೂಹಲಾಸ್ಪದವಾಗಿದೆ.

ಕಡೆಯದಾಗಿ, ''ಜೀವನದಲ್ಲೆಲ್ಲಾ ಸಾಧನೆ ಮಾಡಿಕೊಂಡು ಹೋಗುತ್ತಿರಬೇಕೆ?'' ಎಂಬ ಮಾಸ್ಟರ್‌ನ ಪ್ರಶ್ನೆಗೆ ಪರಮಹಂಸರು ಕೊಟ್ಟ ಉತ್ತರ ವಿವರಣೆ ಪರಿಭಾವನೀಯವಾಗಿದೆ:

''ಇಲ್ಲ, ಮೊದಲು ಸ್ವಲ್ಪ ಕಾಲ ಸೊಂಟಕಟ್ಟಬೇಕಾಗುತ್ತದೆ. ಬಳಿಕ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಎಲ್ಲಿಯವರೆಗೆ ದೋಣಿ, ಅಲೆ, ಬಿರುಗಾಳಿ, ಬಿರುಮಳೆ ಇವುಗಳ ಮೂಲಕ ಅಥವಾ ನದಿಯ ತಿರುವಿನ ಮೂಲಕ ಹಾದು ಹೋಗಬೇಕಾಗಿರುವುದೋ ಅಲ್ಲಿಯವರೆಗೆ ದೋಣಿ ನಡೆಸುವವ ಎದ್ದು ನಿಂತು ಚುಕ್ಕಾಣಿ ಹಲಗೆಯನ್ನು ಬಿಗಿಯಾಗಿ ಹಿಡಿದು ಕೊಂಡಿರಬೇಕಾಗುತ್ತದೆ. ಆದರೆ ಅದನ್ನು ದಾಟಿಯಾದನಂತರ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ...''

ಶ್ರೀರಾಮಕೃಷ್ಣರು ಒಬ್ಬ ಲೋಕೋತ್ತರ ವ್ಯಕ್ತಿ, ಅಥವಾ ಶಕ್ತಿ. ಗಾರ್ಹಸ್ಥ್ಯ ಮತ್ತು ಅಧ್ಯಾತ್ಮ ಸಂಬಂಧವಾದ ಎಲ್ಲ ಪ್ರಶ್ನೆಗಳಿಗೂ ಅವರಲ್ಲಿ ಉತ್ತರ ಪರಂಪರೆಯೇ ಇದೆ, ಬಹಳಷ್ಟು ದೃಷ್ಟಾಂತ ರೂಪದಲ್ಲಿ. ಅವರನ್ನು ದೃಷ್ಟಾಂತ ಚಕ್ರವರ್ತಿ ಎಂದು ಕರೆಯಬಹುದು. ಅವರ ಉಪದೇಶ ಅಥವಾ ಸಂದೇಶಗಳಲ್ಲಿರುವುದು ಮುಖ್ಯವಾಗಿ 'ಮಿತ್ರಸಂಮಿತ' (ಮಿತ್ರ ಎಂದರೆ ಸೂರ್ಯ ಎಂದೂ ಅರ್ಥ): 'ಪ್ರಭುಸಂಮಿತ'ವಲ್ಲ; 'ಕಾಂತಾ ಸಂಮಿತ'ವೂ ಅಲ್ಲಲ್ಲಿ ಸುಳಿಯುತ್ತದೆ. ಅವರ ವಚನಗಳು ಸಾಧು; ಅಷ್ಟೇ ಸ್ವಾದು. ಅಂತೂ ಅವರು ಶುಷ್ಕ ವೈರಾಗಿಯಲ್ಲ, ರಸಋಷಿ!

ಶ್ರೀರಾಮಕೃಷ್ಣ ವಚನ ಸಮುದಾಯದಲ್ಲಿ ಅನುಭವ ಸಂಪತ್ತು, ವ್ಯುತ್ಪತ್ತಿ ಹೇರಳವಾಗಿದ್ದು, ಅದನ್ನು ಹೇಗೆ ಗಳಿಸಿಕೊಂಡರೆಂದು ಆಶ್ಚರ್ಯವಾಗುತ್ತದೆ. ಅದು ವೇದಾಂತವಾದಿಗಳ ಒಣ ಓದಿನಿಂದ ಬಂದದ್ದಲ್ಲ; ಸ್ವಾನುಭವ ನಿಷ್ಪನ್ನವಾದುದು. (ಅವರು ಬಹು ಶ್ರುತರೂ ಹೌದು) ಎಂತಲೇ ಅವರ ಶ್ರೀವಾಣಿ ಹೃದಯದಿಂದ ಹೃದಯಕ್ಕೆ, ಆತ್ಮದಿಂದ ಆತ್ಮಕ್ಕೆ ಮುಟ್ಟುತ್ತದೆ.

ಒಟ್ಟಿನ ಮೇಲೆ ಗೃಹಸ್ಥ ಜೀವನಕ್ಕೂ ಅಧ್ಯಾತ್ಮಕ್ಕೂ ಸೇತುವೆ ಕಟ್ಟಿದ ಸಂತಶ್ರೇಷ್ಠ ಶ್ರೀರಾಮಕೃಷ್ಣರು. ಈ ಕಾಲಕ್ಕೆ ಅದು ಸಂಗತ. (ಎಲ್ಲ ಕಾಲಕ್ಕೂ ಸತತ!)

## ಆದರ್ಶ ಗೃಹಸ್ಥ ಜೀವನ

ಸಾಧಾರಣವಾಗಿ ಮದುವೆಯಾಗಿ ಗೃಹಸ್ಥನಾಗಿರುವುದು ಉತ್ತಮ. ಏಕೆಂದರೆ ಅದು ನಾಲ್ಕು ಆಶ್ರಮಗಳಲ್ಲೊಂದು. ಇದು ಜೀವನದ ಒಂದು ಹಂತ. ಆತ್ಮವಿಕಾಸಕ್ಕೆ ಇದೊಂದು ಮಾರ್ಗ. ಆದರೆ ಬ್ರಹ್ಮಚರ್ಯ ವ್ರತಧಾರಣೆ ಮಾಡಿದವನು ಅಥವಾ ಸಂನ್ಯಾಸಿ ದೀಕ್ಷೆ ತೆಗೆದುಕೊಂಡವನು, ಕಾಮಿನಿ ಕಾಂಚನದ ದಾಸನಾದರೆ ಅವನು ಪಾಪಿಷ್ಠನಾಗುವುದಲ್ಲದೆ ಇಹಪರಗಳೆರಡನ್ನೂ ಕಳೆದುಕೊಳ್ಳುವನು. ಯಾರು ಈ ಪ್ರಪಂಚವನ್ನು ತ್ಯಜಿರುವರೋ ಅವರು ಮತ್ತು ವಿಧವೆಯರು ತಮ್ಮ ಅಜನ್ಮಪರ್ಯಂತ ಬ್ರಹ್ಮಚರ್ಯ ವ್ರತವನ್ನು ಪಾಲಿಸಬೇಕು. ಎಂದೂ ಮನಃಪೂರ್ವಕ ಅದನ್ನು ಭಂಗಮಾಡಕೂಡದು. ಯಾರಿಗೆ ಇದು ಅಸಾಧ್ಯವೋ ಅವರು ತಮ್ಮ ಮತ್ತು ಇತರರ ಒಳ್ಳೆಯದಕ್ಕಾಗಿ ಮದುವೆಯಾಗಲು ಹಿಂದುಮುಂದೆ ನೋಡಕೂಡದು. ಏಕೆಂದರೆ ಅದಕ್ಕೆ ಶಾಸ್ತ್ರದ ಅನುಮತಿಯೂ ಇದೆ. ಸಾಧು ಪಾಲ್, ಬೈಬಲ್ಲಿನಲ್ಲಿ ''ಬೇಯುವುದಕ್ಕಿಂತ ಮದುವೆಯಾಗುವುದೇ ಲೇಸು'' ಎನ್ನುವನು.

ಎಲ್ಲಿಯವರೆಗೆ ನಮ್ಮ ಮನಸ್ಸು ಪ್ರಾಪಂಚಿಕತೆಯಿಂದ ತುಂಬಿರುತ್ತದೆಯೋ, ಎಲ್ಲಿಯವರೆಗೆ ವಿಷಯವಸ್ತುಗಳಿಗಾಗಿ ಮೋಹ ಮತ್ತು ಹಂಬಲಿಕೆ ಇದೆಯೋ, ಅಲ್ಲಿಯವರೆಗೂ ಬಾಹ್ಯ ಪರಿತ್ಯಾಗದಿಂದ ಏನೂ ಪ್ರಯೋಜನವಿಲ್ಲ. ನೀನು ಕೇವಲ ಹೊರಗಡೆ ತ್ಯಾಗಮಾಡಿ ಕಾಡಿಗಾಗಲಿ ಅಥವಾ ಪರ್ವತ ಗುಹೆಗಾಗಲಿ ಓಡಿಹೋಗು. ಪ್ರಪಂಚ ಅಲ್ಲಿಗೂ ನಿನ್ನನ್ನು ಹಿಂಬಾಲಿಸುವುದು. ನಿನ್ನ ಕಣ್ಣಿಗೆ ಮಣ್ಣೆರಚುವುದು ಮತ್ತು ಅನೇಕ ಸೋಗಿನಿಂದ ನಿನ್ನನ್ನು ಚಪಲಚಿತ್ತನನ್ನಾಗಿ ಮಾಡುವುದು; ಹೊಸ ಹೊಸ ಬಂಧನಗಳನ್ನು ನಿನಗಾಗಿ ಸೃಷ್ಟಿಸುವುದು. ಗೃಹಸ್ಥನಾಗಲಿ, ಸಂನ್ಯಾಸಿಯಾಗಲಿ, ಯಾರೇ ಆದರೂ ಆದರ್ಶದ ಮೇಲೆ ಲಕ್ಷ್ಯವಿಲ್ಲದೆ ಇದ್ದರೆ, ಪತನ ಅನಿವಾರ್ಯ. ಯಾರಿಗೂ ನಿನ್ನನ್ನು ರಕ್ಷಿಸಲಾಗುವುದಿಲ್ಲ.

*— ಸ್ವಾಮಿ ವಿರಜಾನಂದ ('ಪರಮಾರ್ಥ ಪ್ರಸಂಗ' ದಿಂದ)*